## ದಿನಾಂಕ : 23.11.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್‌-113ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-113 ಕೋನೇನ ಅಗ್ರಹಾರ ವಾರ್ಡ್ ಕಛೇರಿಯಲ್ಲಿ ದಿನಾಂಕ : 23.11.2020 ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಎಂ.ಜಿ.ಹೆಗ್ಡೆ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್‌-113.
2. ಶ್ರೀ.ವಿ.ಸಾಮಂದಯ್ಯ – ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಟಿ.ಎನ್.ನಾಗಪ್ಪ – ಎಇಇ, ಬೆಸ್ಕಾಂ
4. ಶ್ರೀ.ಶಿವಪ್ರಸಾದ್ – ಕಂದಾಯ ಪರಿವೀಕ್ಷಕರು
5. ಶ್ರೀ.ಎಸ್.ದೇವರಾಜ್ – ಅರಣ್ಯ ನಿರೀಕ್ಷಕರು
6. ಶ್ರೀಮತಿ.ಕುಸುಮಾ.ಬಿ.ಎನ್ – ಎಇ, ಬೆಸ್ಕಾಂ
7. ಶ್ರೀ.ಮನೋಹರ್.ಜಿ – ಎಇ ಬೆಸ್ಕಾಂ
8. ಶ್ರೀ.ಶ್ರೀನಿವಾಸ್ –
9. ಶ್ರೀ.ದಸ್ವಂತ್ – ಎಇ, ಬಿಡಬ್ಲ್ಯೂಎಸ್‌ಎಸ್‌ಬಿ
10. ಶ್ರೀ.ಲೋಹಿತ್‌ಕೆ – ಬಿಡಬ್ಲ್ಯೂಎಸ್‌ಎಸ್‌ಬಿ
11. ಶ್ರೀ.ಪ್ರಭಾಕರನ್ – ತೆರಿಗೆ ನಿರೀಕ್ಷಕರು
12. ಶ್ರೀ.ಆರ್.ರಾಜೇಂದ್ರ – ಕಂದಾಯ ಪರಿವೀಕ್ಷಕರು
13. ಶ್ರೀ.ಟಿ.ಧನಶೇಖರ್ – ಎಎಸ್‌ಐ
14. ಶ್ರೀ.ವಿ.ಮೂರ್ತಿ – ಸ.ಕಂ.ಅ, ಜೀವನ್‌ಭೀಮಾನಗರ
15. ಶ್ರೀಮತಿ.ಪೂರ್ಣಿಮಾ ಶೆಟ್ಟಿ – ಸದಸ್ಯರು
16. ಶ್ರೀಮತಿ.ಪೂರ್ಣಿಮಾ ಕಾರ್ತಿಕ್ – ಸದಸ್ಯರು
17. ಶ್ರೀ.ವಿ.ಚಂದ್ರಶೇಖರ್ ರೆಡ್ಡಿ – ಸದಸ್ಯರು
18. ಶ್ರೀ.ಅರವಿಂದ್.ಜಿ – ಸದಸ್ಯರು
19. ಶ್ರೀ.ಮುರಳಿಮೋಹನ್ – ಸದಸ್ಯರು
20. ಶ್ರೀ.ಕೆ.ಫಯಾಜ್ ಅಹ್ಮದ್ – ಸದಸ್ಯರು
21. ಶ್ರೀ.ಪದ್ಮನಾಭ್.ಎಸ್.ಆರ್ – ಸದಸ್ಯರು
22. ಶ್ರೀ.ಅರವಿಂದ್‌ಕುಮಾರ್.ಸಿ – ಸದಸ್ಯರು
23. ಶ್ರೀ.ಎಸ್.ಜೈಕುಮಾರ್ – ಸದಸ್ಯರು
24. ಶ್ರೀ.ಅನಿಲ್‌ಕುಮಾರ್.ಕೆ.ವಿ – ಸದಸ್ಯರು
25. ಶ್ರೀಮತಿ.ಉಷಾ ಶಂಕರ್ – ಸದಸ್ಯರು
26. ಶ್ರೀಮತಿ.ವನಿತಾ.ಎನ್ – ಸದಸ್ಯರು
27. ಶ್ರೀ.ಚಂದ್ರಕಾಂತ್ ಬಾಬುರೆಡ್ಡಿ – ಸದಸ್ಯರು

ಪ್ರಥಮವಾಗಿ ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಹಿಂದಿನ ಸಭೆಯ ನಡವಳಿಗಳ ಬಗ್ಗೆ ಮಾತನಾಡಿದರು. ನಂತರ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ವಿ.ಸಾಮುಂದಯ್ಯರವರು ಸಭೆಗೆ ಆಗಮಿಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ನಂತರದಲ್ಲಿ ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಲಾಯಿತು ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- ಶ್ರೀ.ಶೈಕುಮಾರ್‌ರವರು ಮಾತನಾಡಿ ಬಿಡಿಎ ಲೇಔಟ್‌ನಲ್ಲಿ ಬೆಸ್ಕಾಂ ವತಿಯಿಂದ ಯುಜಿಡಿ ಕೇಬಲ್‌ಗಳನ್ನು ಅಳವಡಿಸುತ್ತಿರುತ್ತಾರೆ. ಸದರಿ ರಸ್ತೆ ಅಗೆದ ಭಾಗವನ್ನು ಪುನರ್‌ನಿರ್ಮಾಣ ಮಾಡುವಂತೆ ಸಭೆಗೆ ತಿಳಿಸಿದರು. ಈ ವಿಷಯವಾಗಿ ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳು ಪುನರ್‌ನಿರ್ಮಾಣ ಕೆಲಸವನ್ನು ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.
- ಶ್ರೀ.ಚಂದ್ರಶೇಖರ್ ರೆಡ್ಡಿಯವರು ಮಾತನಾಡಿ, ನಂಜಾರೆಡ್ಡಿ ಲೇಔಟ್ ಮತ್ತು ಬಿಡಿಎ ಲೇಔಟ್‌ಗಳಿಗೆ ವಿದ್ಯುಚ್ಛಕ್ತಿ ಲೈನ್‌ಗಳು ಬೇರೆ ಬೇರೆಯಾಗಿದೆಯೇ ಅಥವಾ ಒಂದೇ ಆಗಿರುತ್ತದೆಯೇ ಎಂದು ಕೇಳಿದಾಗ ಬೆಸ್ಕಾಂ ಅಧಿಕಾರಿಗಳು ಉತ್ತರಿಸಿ ಲೈನ್‌ಗಳು ಬೇರೆ ಇದ್ದು, ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಸಮಯದಲ್ಲಿ ಬದಲಾಯಿಸಿ ವಿದ್ಯುತ್ ಒದಗಿಸಲಾಗುತ್ತಿರುತ್ತದೆ ಎಂದು ತಿಳಿಸಿದರು.

  ಮುಂದುವರೆದು, ನಂಜಾರೆಡ್ಡಿ ಲೇಔಟ್‌ನಲ್ಲಿ ಟ್ರಾನ್ಸ್‌ಫಾರ್ಮರ್ ಬಳಿ ಕಸ ಹಾಕುತ್ತಿರುವುದು ಕಂಡುಬಂದಿರುತ್ತದೆ ಆದುದರಿಂದ ಆದಷ್ಟು ಸಿಂಗಲ್ ಪೋಲ್ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದು ಉತ್ತಮವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

  ಮುರುಗೇಶ್‌ಪಾಳ್ಯದ ರಸ್ತೆ ಬದಿಯಲ್ಲಿ ನಿಲ್ಲಿಸಿರುವ ತಳ್ಳುಗಾಡಿ ಅಂಗಡಿಗಳನ್ನು ತೆರವುಗೊಳಿಸುವಂತೆ ಸಭೆಗೆ ತಿಳಿಸಿದರು. ಇದಕ್ಕೆ ಸಹಾಯಕ ಅಭಿಯಂತರರು, ಮಾತನಾಡಿ, ಅಂಗಡಿಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವದು ಎಂದು ತಿಳಿಸಿದರು.

- ಶ್ರೀ.ಅರವಿಂದ್‌ರವರು ಮಾತನಾಡಿ ಗಾಲ್ಫ್ ರಸ್ತೆ ಮತ್ತು ಬಿಡಿಎ ಲೇಔಟ್‌ನಲ್ಲಿ ಡಾಂಬರೀಕರಣ ಕೈಗೊಳ್ಳುವಂತೆ ಕೋರಿರುತ್ತಾರೆ. ಇದಕ್ಕೆ ಸಹಾಯಕ ಅಭಿಯಂತರರು, ಮಾತನಾಡಿ, ಸುಮಾರು 10–15 ದಿನಗಳಲ್ಲಿ ಸದರಿ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗುವುದು ಎಂದು ತಿಳಿಸಿದರು.

  ಮುಂದುವರೆದು, ಏರ್‌ಪೋರ್ಟ್ ಕಾಂಪೌಂಡ್ ವಾಲ್‌ಗೆ ಹೊಂದಿಕೊಂಡಂತೆ ಇರುವ ರಸ್ತೆಗೆ ಡಾಂಬರೀಕರಣವನ್ನು ಹಾಕುವಂತೆ ಸಭೆಗೆ ಕೋರಿರುತ್ತಾರೆ. ಸಹಾಯಕ ಅಭಿಯಂತರರು, ಮಾತನಾಡಿ, ಸದರಿ ರಸ್ತೆಗೆ ಈಗಾಗಲೇ ನಗರೋತ್ಥಾನ ಅನುದಾನದಡಿಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲಾಗಿರುತ್ತದೆ ಅನುಮೋದನೆಗೊಂಡ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.

  ವಿನಾಯಕನಗರ ಬಿ ಬ್ಲಾಕ್‌ನಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಒಳಚರಂಡಿ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿದ್ದು, ರಸ್ತೆ ಅಗೆದ ಭಾಗಕ್ಕೆ ಡಾಂಬರೀಕರಣ ಮಾಡುವಂತೆ ಸಭೆಗೆ ತಿಳಿಸಿದಾಗ, ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ಇದಕ್ಕೆ ಒಪ್ಪಿರುತ್ತಾರೆ.

ಶ್ರೀ.ಚಂದ್ರಶೇಖರ್‌ರವರು ಮಾತನಾಡಿ, ಕೋಡಿಹಳ್ಳಿ 5ನೇ ಕ್ರಾಸ್ ರಸ್ತೆ, ಮುನಿಯಲ್ಲಪ್ಪ ಗಾರ್ಡನ್‌ನಲ್ಲಿ ಡಾಂಬರೀಕರಣ ಮಾಡುವಂತೆ ತಿಳಿಸಿದರು. ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮವಹಿಸುವುದಾಗಿ ಸಹಾಯಕ ಅಭಿಯಂತರರು ತಿಳಿಸಿದರು.

ಶ್ರೀ.ಜೈಕುಮಾರ್‌ರವರು ಮಾತನಾಡಿ, ಬಿಡಿಎ ಲೇಔಟ್‌ನಲ್ಲಿ ತ್ಯಾಜ್ಯ ಹಾಗೂ ಡೆಬ್ರಿಸ್‌ಗಳನ್ನು ರಾತ್ರಿವೇಳೆಯಲ್ಲಿ ಅನಧೀಕೃತವಾಗಿ ಸುರಿಯುತ್ತಿರುತ್ತಾರೆ. ಸದರಿ ಡೆಬ್ರಿಸ್ ಪಾಯಿಂಟ್‌ಗಳನ್ನು ತೆರವುಗೊಳಿಸಲು ಹಾಗೂ ಈ ಚಟುವಟಿಕೆಗಳನ್ನು ನಿಯಂತ್ರಿಸಲು ಮಾರ್ಷಲ್‌ಗಳನ್ನು ನಿಯೋಜಿಸುವಂತೆ ಸಭೆಗೆ ತಿಳಿಸಿದರು ಇದಕ್ಕೆ ಅಧ್ಯಕ್ಷರು ಒಪ್ಪಿರುತ್ತಾರೆ.

- ಶ್ರೀ.ಚಂದ್ರಶೇಖರ್‌ರವರು ಮಾತನಾಡಿ, ಬಿಡಿಎ ಲೇಔಟ್‌ಗೆ ಹೊಂದಿಕೊಂಡಂತೆ ಇರುವ ಸ್ಮಶಾನವನ್ನು ಸ್ವಚ್ಛಗೊಳಿಸುವಂತೆ ಸಭೆಗೆ ತಿಳಿಸಿದರು. ಅದಕ್ಕೆ ಸಹಾಯಕ ಅಭಿಯಂತರರು ಸ್ವಚ್ಛಗೊಳಿಸಲು ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.
- ಶ್ರೀ.ಜೈಕುಮಾರ್‌ರವರು ಮಾತನಾಡಿ, ಬಿಡಿಎ ಲೇಔಟ್‌ನಲ್ಲಿ ಮಳೆನೀರುಗಾಲುವೆಯ ಚರಂಡಿಯ ಸ್ವಚ್ಛತಾ ಕಾರ್ಯ ಮಾಡುವಂತೆ ತಿಳಿಸಿದರು. ಇದಕ್ಕೆ ಸಂಬಂಧಪಟ್ಟ ಇಲಾಖೆಯವರ ಗಮನಕ್ಕೆ ತರಲಾಗುವುದು ಎಂದು ತಿಳಿಸಲಾಯಿತು.
- ಎಲ್ಲಾ ಸದಸ್ಯರುಗಳು ಒಕ್ಕೋರಲಿನಿಂದ ಸಿಲ್ಟ್ ಅಂಡ್ ಟ್ರಾಕ್ಟರ್ ಅನ್ನು ಒಂದೊಂದಿ ದಿನ ಒಂದೊಂದು ಬಡಾವಣೆಗೆ ಕಳುಹಿಸುವಂತೆ ಸಭೆಗೆ ತಿಳಿಸಿದರು. ಇದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ ವೇಳಾಪಟ್ಟಿ ಹಾಗೂ ಕಾರ್ಯತಂತ್ರ ರೂಪಿಸಿ ಕ್ರಮವಹಿಸುವುದಾಗಿ ತಿಳಿಸಿದರು.
- ಶ್ರೀ.ಚಂದ್ರಶೇಖರ್‌ರವರು ಮಾತನಾಡಿ, ಬಿಡಬ್ಲ್ಯೂಎಸ್‌ಎಸ್‌ಬಿ ಮ್ಯಾನ್‌ಹೋಲ್‌ಗಳಿಂದ ಕೊಳಚೆ ನೀರು ಹೊರಬರುತ್ತಿದ್ದು, ಬಿಡಬ್ಲ್ಯೂಎಸ್‌ಎಸ್‌ಬಿ ಜೆಟ್ಟಿಂಗ್ ಮಿಷನ್ ಅನ್ನು ವಾರ್ಡಿಗೆ ಸಮರ್ಪಕವಾಗಿ ಒದಗಿಸುವಂತೆ ಕೋರಿದರು. ಇದಕ್ಕೆ ಬಿಡಬ್ಲ್ಯೂಎಸ್‌ಎಸ್‌ಬಿಯವರು ಒಪ್ಪಿರುತ್ತಾರೆ.
- ಅಧ್ಯಕ್ಷರು ಮಾತನಾಡಿ ಮ್ಯಾನ್‌ಹೋಲ್‌ಗಳಿಂದ ಹೊರಬರುವ ನೀರಿನಿಂದ ಕೋವಿಡ್-19 ಬರುವ ಸಾಧ್ಯತೆಗಳು ಸಹ ಇರುವುದರಿಂದ ಮ್ಯಾನ್‌ಹೋಲ್‌ನಿಂದ ಹೊರಬರುವ ನೀರನ್ನು ನಿಯಂತ್ರಿಸುವಂತೆ ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳಿಗೆ ಸೂಚಿಸಿದರು.
- ಶ್ರೀ.ಅರವಿಂದ್‌ರವರು ಮಾತನಾಡಿ, ಕಂದಾಯ ವಸೂಲಿ ಮಾಡುವುದಕ್ಕೆ ಆಯಾ ಪ್ರದೇಶದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘರವರಿಗೆ ತಿಳಿಸಿದಲ್ಲಿ ಕಂದಾಯ ವಸೂಲಿ ಮಾಡಲು ಆರ್‌ಡಬ್ಲ್ಯೂಎ ರವರು ಸಹ ಜೊತೆಗೂಡಿ ಬೆಂಬಲ ನೀಡುವುದಾಗಿ ತಿಳಿಸಿರುತ್ತಾರೆ.
- ಶ್ರೀ.ಜೈಕುಮಾರ್‌ರವರು ಬಿಡಿಎ ಲೇಔಟ್‌ನಲ್ಲಿ ವಾಟರ್ ಲೈನ್ ಲಿಂಕಿಂಗ್ ಮಾಡುವ ಬಗ್ಗೆ ಕೇಳಿದಾಗ, ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ಒಂದು ವಾರದೊಳಗೆ ಪೂರ್ಣಗೊಳಿಸುವುದಾಗಿ ತಿಳಿಸಿದರು.
- ಶ್ರೀಮತಿ.ಪೂರ್ಣಿಮಾ ಶೆಟ್ಟಿರವರು ಮಾತನಾಡಿ, ರುಸ್ತುಂಬಾಗ್ 1ನೇ ಮುಖ್ಯರಸ್ತೆಯಲ್ಲಿ ಒಂದು ಕಛೇರಿಯಿದ್ದು, ಈ ಕಛೇರಿಯ ಗೇಟ್ ಅನ್ನು ಮುಚ್ಚಿಸಿಕೊಡುವಂತೆ ಸಭೆಗೆ ತಿಳಿಸಿದರು. ಅದಕ್ಕೆ ಪೊಲೀಸ್‌ರವರು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

- ಶ್ರೀ.ಬಾಬುರವರು ಮಾತನಾಡಿ, ಕೊನೇನ ಅಗ್ರಹಾರದಲ್ಲಿ ಕೆಲವು ಪ್ರದೇಶದಲ್ಲಿ ಹುಡುಗರು ಅನಗತ್ಯವಾಗಿ ಸುತ್ತಾಡುತ್ತಿರುತ್ತಾರೆ ಹಾಗೂ ಪಾರ್ಕ್‌ಗಳ ಶೌಚಗೃಹದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುತ್ತದೆ ಆದ್ದರಿಂದ ಈ ಪ್ರದೇಶದಲ್ಲಿ ಪೊಲೀಸ್ ಬೀಟ್ ನಿಯೋಜಿಸುವಂತೆ ಸಭೆಗೆ ತಿಳಿಸಿದರು. ಅದಕ್ಕೆ ಪೊಲೀಸ್‌ರವರು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.
- ಶ್ರೀ.ಜೈಕುಮಾರ್‌ರವರು ಮಾತನಾಡಿ, ಬಿಡಿಎ ಲೇಔಟ್‌ನಲ್ಲಿ ಕುಡಿದು ಗಲಾಟೆ ಮಾಡುತ್ತಿರುತ್ತಾರೆ 2ನೇ ಅಡ್ಡರಸ್ತೆಯಲ್ಲಿ ಸುಮಾರು 40 ರಿಂದ 50 ಹುಡುಗಿಯರು ವಾಸವಿದ್ದು, ರಾತ್ರಿ ವೇಳೆಯಲ್ಲಿ ಸುಮಾರು 10 ರಿಂದ 2 ಗಂಟೆಯವರೆಗೆ ಓಡಾಡುತ್ತಿದ್ದು, ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯುಂಟಾಗಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಈ ಬಗ್ಗೆ ಲಿಖಿತ ಪತ್ರಮುಖೇನ ಮೇಲಾಧಿಕಾರಿಗಳಿಗೆ ನೀಡಿದಲ್ಲಿ ಸೂಕ್ತ ಕ್ರಮವಹಿಸಲಾಗುವುದು ಎಂದು ಪೊಲೀಸ್‌ರವರು ತಿಳಿಸಿರುತ್ತಾರೆ.
- ಶ್ರೀ.ಚಂದ್ರಶೇಖರ್‌ರವರು ಮಾತನಾಡಿ, ವೋಟರ್ ಐಡಿ ಮಾಡಲು ಬಿಬಿಎಂಪಿ ಕಛೇರಿಗೆ ಬರಬೇಕೆ ಅಥವಾ ಎಲ್ಲಿಗೆ ಬರಬೇಕು ಎಂಬ ಬಗ್ಗೆ ಕೇಳಿದಾಗ ಸಂಬಂಧಪಟ್ಟ ಅಧಿಕಾರಿಗಳು ಮಾತನಾಡಿ ವೆಬ್‌ಸೈಟ್‌ನಲ್ಲಿಯೇ ಅಪ್‌ಡೇಟ್ ಮಾಡಬಹುದು ಇಲ್ಲವಾದಲ್ಲಿ ಪ್ರತಿ ಭಾನುವಾರ ಬಿಬಿಎಂಪಿ ಕಛೇರಿಗೆ ಬಂದು ವೋಟರ್ ಐಡಿ ಮಾಡಿಸಬಹುದು ಎಂದು ತಿಳಿಸಿದರು.
- ಶ್ರೀ.ಯಾದವ್‌ರವರು ಮಾತನಾಡಿ, ಡೈಮಂಡ್ ಡಿಸ್ಟ್ರಿಕ್ಟ್ ನಿವಾಸಿಗಳು ಚುನಾವಣೆಯ ಸಮಯದಲ್ಲಿ ಬಹಳಷ್ಟು ಜನ ಮತ ಚಲಾಯಿಸಲು ಬರುತ್ತಿಲ್ಲ ಇದಕ್ಕೆ ಮತಘಟ್ಟೆಯು ದೂರವಿರುವುದು ಕಾರಣವಾಗಿರುತ್ತದೆ. ಆದ್ದರಿಂದ ಮತಘಟ್ಟೆಯನ್ನು ಡೈಮಂಡ್ ಡಿಸ್ಟ್ರಿಕ್ಟ್‌ಗೆ ಹತ್ತಿರವಾಗಿರುವ ಕಡೆ ಅಳವಡಿಸಿದಲ್ಲಿ ಅನುಕೂಲಕರವಾಗಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಕಂದಾಯ ಅಧಿಕಾರಿಗಳು ಮಾತನಾಡಿ, ಮತಘಟ್ಟೆಗಳನ್ನು ಸ್ಥಳಾಂತರಿಸುವ ಅಧಿಕಾರ ನಮ್ಮ ವ್ಯಾಪ್ತಿಯಲ್ಲಿರುವುದಿಲ್ಲ ಇದು ಚುನಾವಣಾಧಿಕಾರಿಗಳ ವಿವೇಚನೆಗೆ ಒಳಪಟ್ಟಿರುತ್ತದೆ ಎಂದು ತಿಳಿಸಿರುತ್ತಾರೆ.
- ಸದಸ್ಯರುಗಳು ಮಾತನಾಡಿ, ಬೀದಿ ನಾಯಿಗಳು ತುಂಬಾ ಹೆಚ್ಚಾಗಿದ್ದು, ಇದರಿಂದ ನಿವಾಸಿಗಳಿಗೆ ತೊಂದರೆಯುಂಟಾಗುತ್ತಿರುತ್ತದೆ ಎಂದು ತಿಳಿಸಿದಾಗ, ಸಂಬಂಧಪಟ್ಟ ಅನಿಮಲ್ ಹಸ್ಬೆಂಡ್ರಿ ಇಲಾಖೆಯವರು ಮಾತನಾಡಿ ಬೀದಿನಾಯಿಗಳಿಗೆ ಫೀಡಿಂಗ್ ಮಾಡಿ ಅದಕ್ಕೆ ಸ್ಟೆರಿಲೈಜೇಶನ್ ಮಾಡಿ ಅದೇ ಸ್ಥಳಕ್ಕೆ ತಂದು ಬಿಡಲಾಗುತ್ತಿರುತ್ತದೆ ಎಂದು ತಿಳಿಸಿದರು.
- ಸದಸ್ಯರುಗಳು ಮಾತನಾಡಿ, ಚಿಕನ್ ಮತ್ತು ಮಟನ್ ಅಂಗಡಿಗಳನ್ನು ತೆರೆಯುವ ಸಮಯದಲ್ಲಿ ಆರ್‌ಡಬ್ಲ್ಯೂಎ ರವರ ನಿರಾಕ್ಷೇಪಣಾ ಪತ್ರವನ್ನು ಪಡೆದು ಲೈಸನ್ಸ್ ನೀಡುವಂತೆ ಸಭೆಗೆ ತಿಳಿಸಿದರು. ಇದಕ್ಕೆ ಅನಿಮಲ್ ಹಸ್ಬೆಂಡ್ರಿ ಇಲಾಖೆಯವರು ಒಪ್ಪಿರುತ್ತಾರೆ.
- ಸದಸ್ಯರುಗಳು ವಾರ್ಡಿನ ಕೆಲವು ಕಡೆಗಳಲ್ಲಿ ಮರಗಳು ಬೀಳುವ ಸಂಭವವಿದ್ದು, ಇದನ್ನು ತೆರವುಗೊಳಿಸುವಂತೆ ಕೋರಿದಾಗ, ಅರಣ್ಯ ಇಲಾಖೆಯವರು ಮಾತನಾಡಿ, ಮರಗಳನ್ನು ತೆಗೆಯುವುದಕ್ಕೆ ಉಚ್ಚ ನ್ಯಾಯಾಲಯದ ಸಮಿತಿಯ ಅನುಮತಿ ಪಡೆಯಬೇಕಾಗಿದ್ದು, ಸಮಿತಿಯು ಮರಗಳನ್ನು ತೆಗೆಯುವುದಕ್ಕೆ ಅನುಮತಿ ನೀಡಿದಲ್ಲಿ ಮಾತ್ರ ಮರಗಳನ್ನು ತೆಗೆಯಲಾಗುವುದು ಇಲ್ಲವಾದಲ್ಲಿ ಟ್ರಿಮ್ಮಿಂಗ್ ಮಾಡಲು ಮಾತ್ರ ಅವಕಾಶವಿರುತ್ತದೆ ಎಂದು ಸಭೆಗೆ ತಿಳಿಸಿದರು.

- ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡಿನಲ್ಲಿ ಟ್ರೀ ಪ್ಲಾಂಟ್ ಮಾಡಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಬಗ್ಗೆ ಎಲ್ಲಾ ಸದಸ್ಯರಿಗೆ ತಿಳಿಸಿದರು.
- ಶ್ರೀ.ಚಂದ್ರಶೇಖರ್‌ರವರು ಮಾತನಾಡಿ, ವಾರ್ಡಿಗೆ ಕೋವಿಡ್ ನಿರ್ವಹಣೆಯ ಸಂಬಂಧ ನೀಡಲಾಗಿದ್ದ ರೂ. 20.00 ಲಕ್ಷಗಳ ಅನುದಾನದ ಬಗ್ಗೆ ವಿವರಣೆ ನೀಡುವಂತೆ ಸಭೆಗೆ ತಿಳಿಸಿದರು. ಇದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ ಸದರಿ 20.00 ಲಕ್ಷಗಳ ಬಿಲ್ ಅನ್ನು ಇದೂವರೆವಿಗೂ ಯಾರಿಗೂ ಪಾವತಿಸಿರುವುದಿಲ್ಲ ಎಂದು ತಿಳಿಸಿದರು.
- ಶ್ರೀಮತಿ.ಪೂರ್ಣಿಮಾರವರು ಸಿಗ್ನಲ್ ಫ್ರೀ ಕಾರಿಡಾರ್ ಬಗ್ಗೆ ಕೇಳಿದಾಗ ಮಾನ್ಯ ಅಧ್ಯಕ್ಷರು ಮಾತನಾಡಿ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಲು ಏರ್ಪಾಟು ಮಾಡುವುದಾಗಿ ತಿಳಿಸಿದರು. ಹಾಗೂ ಟ್ರಾಫಿಕ್ ವಿಭಾಗದವರನ್ನು ಕರೆಸುವುದಾಗಿ ತಿಳಿಸಿದರು.

ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಮತ್ತೊಮ್ಮೆ ಸೂಚಿಸುತ್ತಾ, ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿಗಳು<br>ವಾರ್ಡ್ ಸಮಿತಿ-113 | ಅಧ್ಯಕ್ಷರು 24/11/2020.<br>ವಾರ್ಡ್ ಸಮಿತಿ, ವಾರ್ಡ್ 113<br>ಹಾಗೂ ನೋಡಲ್ ಅಧಿಕಾರಿಗಳು,<br>ವಾರ್ಡ್ 113 |